ಶ್ರೀ ಕೆ. ಹನುಮಂತಯ್ಯ.—ತಾವಾಗಿ ತಾವೇ ಪರಿಶೀಲನೆ ಮಾಡಬೇಕು. ದೂರು ಕೊಟ್ಟಿದ್ದನ್ನು ಕೂಡ ಪರೀಕ್ಷೀಲನೆ ಮಾಡುತ್ತಾರೆ. ಈ ಎರಡು ಮಾರ್ಗಗಳನ್ನೂ ಅನುಸರಿಸಬಹುದು.

ಶ್ರೀ ಎಸ್. ಗೋಪಾಲಗೌಡ.—ಹೀಗೆ ಪರಿಶೀಲನೆ ಮಾಡಿದ್ದರಲ್ಲಿ ಇತ್ತೀಚೆಗೆ ಫಾರೆಸ್ಟ್ ಡಿಪಾರ್ಟ್‌ಮೆಂಟು ಅಥವಾ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಎಷ್ಟು ಜನರು ತಮ್ಮ ಆದಾಯಕ್ಕಿಂತ ಹೆಚ್ಚು ಮಟ್ಟದ ಜೀವನ ಮಾಡುತ್ತಾ ಇದ್ದಾರೆ ಎಂಬುದನ್ನು ಕಂಡು ಹಿಡಿದಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಇನ್ನೂ ಕಂಡು ಹಿಡಿದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಈಗ ಪ್ರಸ್ತುತ ತನಿಖೆ ನಡೆಯುತ್ತಾ ಇದೆಯೇ ?

ಶ್ರೀ ಕೆ. ಹನುಮಂತಯ್ಯ.—ನಡೆಯುತ್ತಾ ಇದೆ.

ಶ್ರೀ ಎಸ್. ಗೋಪಾಲಗೌಡ.—ತನಿಖೆ ನಡೆದೂ ಕೂಡ ಅಂಥ ನಂದರ್ಭ ಯಾವುದೂ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಇಲ್ಲ. ಯಾವು ದಾದರೂ ಒಂದು ನಂದರ್ಭದಲ್ಲಿ ಇಂಥ ಅಧಿಕಾರಿ ಹೀಗೆ ಮಾಡಿದ್ದಾನೆ ಎಂಬುದು ಕಂಡುಬಂದಾಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಯೇ ಹೊರತು ಅನುಮಾನಕ್ಕೆ ಆಸ್ಪದವಿಲ್ಲದೇ ಇದ್ದರೆ ಕಾರ್ಯಕ್ರಮ ತೆಗೆದುಕೊಳ್ಳಲು ಅವಕಾಶವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಈ ಕಾನೂನು ಮಂತ್ರಿಗಳಿಗೂ ಮತ್ತು ಸರ್ಕಾರದಿಂದ ಸಂಭಾವನೆ ಪಡೆಯತಕ್ಕ ಇತರ ಜನರಿಗೂ ಅನ್ವಯಿಸುತ್ತದೆಯೇ ?

ಶ್ರೀ ಕೆ. ಹನುಮಂತಯ್ಯ.—ಈಗ ಅನ್ವಯಿಸುತ್ತಾ ಇಲ್ಲ; ನಾನಾದರೂ ಆ ರೀತಿ ಅನ್ವಯಿಸುವುದು ಒಳ್ಳೆಯದು ಎಂದು ಒಪ್ಪಿಕೊಳ್ಳುತ್ತೇನೆ.

Sri R. ANANTARAMAN.—Is there a rule that the officials will have to file an affidavit declaring their properties at the time of assuming office ?

Sri K. HANUMANTHAIYA.—I do not know whether they have filed the affidavit or not. I am not conversant with the details.

Bellary District (Revenue and expenditure).

Q—17. **Sri K. LAKKAPPA** (Channarayapatna).—

Will the Government be pleased to state :—

(*a*) what is the revenue anticipated by the Government from Bellary District for the year 1954-55 ;

(*b*) what is the expenditure envisaged for the same year ;

(*c*) whether any deficit is anticipated ; if so, how much ?

A.—**Sri K. HANUMANTHAIYA** (Chief Minister).—

(*a*) About Rs. 92 lakhs.

(*b*) Expenditure on Revenue account is about Rs. 133 lakhs, and on Capital account Rs. 83 lakhs.

(*c*) The estimated Revenue deficit is about Rs. 41 lakhs. The exact figure will be known after the basis of allocation of Public Debt is finalised.

ಶ್ರೀ ಕೆ. ಲಕ್ಕಪ್ಪ.—ಈ ಪಬ್ಲಿಕ್ ಡೆಟ್ಸ್ ನಂಬಂಧವಾಗಿ ನಮ್ಮ ಮೈನೂರು ಸರ್ಕಾರ, ಹೈದರಾಬಾದು ಸರ್ಕಾರ ಮತ್ತು ಆಂಧ್ರ ಸರ್ಕಾರದವರೊಡನೆ ಪರಸ್ಪರ ಮಾತುಕತೆ ನಡೆಯುದೆಯೇ ?

ಶ್ರೀ ಕೆ. ಹನುಮಂತಯ್ಯ.—ಮಾತುಕತೆ ನಡೆಯು ವುದಕ್ಕೆ ಪ್ರಾರಂಭವಾಗಿದೆ. ಏಕೆಂದರೆ ಈ ವಿಷಯಗಳ ನ್ನೆಲ್ಲಾ ಮೊದಲು ಅಕೌಂಟೆಂಟ್ ಜನರಲ್‌ರವರು ಫೈನಲೈಸ್ ಮಾಡಬೇಕು. ಈಗ ಮದರಾಸ್ ಅಕೌಂ ಟೆಂಟ್ ಜನರಲ್‌ರವರು ಈ ವಿಷಯದಲ್ಲಿ ಒಂದು ರಿಪೋರ್ಟ್ ಸಿದ್ಧಮಾಡಿದ್ದಾರೆ. ಇನ್ನುಮೇಲೆ ಮಾತು ಕತೆ ಆ ಆಧಾರದ ಮೇಲೆ ನಡೆಯುತ್ತದೆ.

ಶ್ರೀ ಕೆ. ಲಕ್ಕಪ್ಪ.—ಈ ಪಬ್ಲಿಕ್ ಡೆಟ್ಸ್ ನಮ್ಮ ಮೇಲೆ ಎಷ್ಟು ಬೀಳಬಹುದು ಎಂಬುದನ್ನು ಅಪ್ರಾಕ್ಸಿ ಮೇಟ್ ಆಗಿ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಅಪ್ರಾಕ್ಸಿಮೇಟ್ ಆಗಿ ಹೇಳುವುದಕ್ಕೆ ಸಾಧ್ಯ. ಈಗ ತಾವು ಬಡ್ಜೆಟ್ ನೋಡಿ ದರೆ ಗೊತ್ತಾಗುತ್ತದೆ. ಅದರಲ್ಲಿ 20 ಲಕ್ಷ ರೂಪಾಯಿ ಗಳನ್ನು ಬಡ್ಡಿ ಕೊಡುವುದಕ್ಕಾಗಿ ತೆಗೆದಿದ್ದೇವೆ. ಅದರಿಂದ ಸ್ವಲ್ಪ ಹೆಚ್ಚು ಕಮ್ಮಿ ಸಾಲದ ಪ್ರಮಾಣ ಎಷ್ಟು ಎಂಬುದು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ತುಂಗಭದ್ರಾ ಅಣೆಕಟ್ಟಿನ ನಂಬಂಧವಾಗಿ ಮೈನೂರು ಸರ್ಕಾರದವರು ಏನಾ ದರೂ ಖರ್ಚು ಕೊಡಬೇಕಾದ ನಂದರ್ಭವಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಹೌದು ; ಖರ್ಚಾಗು ವುದರಲ್ಲಿ ಮೈನೂರು ಸರ್ಕಾರದವರೂ ಕೊಡಬೇಕಾಗು ತ್ತದೆ.

ಶ್ರೀ ಕೆ. ಲಕ್ಕಪ್ಪ.—ಎಷ್ಟು ಎಂಬುದನ್ನು ಹೇಳುವು ದಕ್ಕೆ ಸಾಧ್ಯವೇ ?

ಶ್ರೀ ಕೆ. ಹನುಮಂತಯ್ಯ.—ಈ ವರ್ಷ 49½ ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಕಾಣಿಸಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈ 49½ ಲಕ್ಷ ರೂಪಾಯಿಗಳನ್ನಲ್ಲದೆ ಬಡ್ಡಿಯನ್ನೂ ಕೊಡಬೇಕಾಗು ತ್ತದೆಯಲ್ಲವೇ ?

ಶ್ರೀ ಕೆ. ಹನುಮಂತಯ್ಯ.—ಕೊಡಬೇಕು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಒಟ್ಟು ಸಾಲ ಹೊರಿಸುವುದಕ್ಕೆ ಹಣ ಕೊಡಬೇಕಾಗುವುದು ಎಷ್ಟು ?

ಶ್ರೀ ಕೆ. ಹನುಮಂತಯ್ಯ.—ಉದ್ದೇಶಪೂರ್ವಕವಾಗಿ ಆ ಮೊಬಲಗನ್ನು ನಾನು ಹೇಳಲಲ್ಲ. ಆಂಧ್ರ ಸರ್ಕಾರ ದವರೊಡನೆ ಕಾರ್ಫರೆನ್ಸ್ ಆದಮೇಲೆ ಈ ಮೊಬಲಗಿ ನಲ್ಲಿ ರೆವಿನ್ಯೂ ಇಂದ ಎಷ್ಟು, ತುಂಗಭದ್ರಾ ಅಣೆಕಟ್ಟು ಕಟ್ಟಿಸುವುದಕ್ಕೆ ಎಷ್ಟು ಖರ್ಚಾಗಿದೆ ಎಂದರೆ ಕ್ಯಾಪಿಟಲ್ ಇನ್‌ವೆಸ್ಟ್‌ಮೆಂಟ್ ಎಷ್ಟು ಎಂಬುದನ್ನು ಏಂಗಡಿಸಿ ನಮಗೆ ಎಷ್ಟು ಸಾಲ ಉಳಿಯುತ್ತದೆ ಎಂಬ ನಿರ್ಧಾ ರಕ್ಕೆ ಬಂದಿದೆ. ಆದ್ದರಿಂದ ಈ ದಿವನವೇ ತುಂಗ ಭದ್ರಾ ಯೋಜನೆಗೆ ಇಷ್ಟು ಖರ್ಚಾಗಿ ನಾವು ಇಷ್ಟು ಸಾಲ ಕೊಡಬೇಕು ಎಂಬುದನ್ನು ನಿಗದಿಯಾಗಿ ಹೇಳುವು ದಕ್ಕೆ ಸಾಧ್ಯವಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿ ಅವರ ವರದಿಯಲ್ಲಿ ಈ ಅಂಕಿ ಅಂಶವನ್ನು ಕೊಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಆ ಕಮಿಟಿಯ ವರದಿ ಬರಲಿ, ನೋಡೋಣ.

Facts Finding Committee for formation of United Karnataka.

Q.—18. Sri K. LAKKAPPA (Channarayapatna).—

Will the Government be pleased to state:—

(*a*) whether they have appointed a Facts Finding Committee in connection with the formation of a United Karnataka;

(*b*) what are the terms of reference to this Committee;

(*c*) how many sittings this Committee had so far;

(*d*) whether they have completed their work;

(*e*) if not completed, when are they expected to complete their work?

A.—Sri K. HANUMANTHAIYA (Chief Minister).—

(*a*) Yes.
(*b*) *Vide* annexure printed below.
(*c*) Six sittings.
(*d*) No.
(*e*) Before 31st October 1954.

*ANNEXURE.

FACTS FINDING COMMITTEE.

The terms of reference of the Committee are—

(i) to gather data of the area and population of the Kannada-speaking people in the States of Madras, Bombay, Hyderabad and Coorg;

(ii) to assess the level of development in those areas particularly in the fields of Education, Medical and Public Health, Rural Development, Industries, Irrigation and Power;

(iii) to ascertain the availability of natural resources;

(iv) to collect figures relating to the revenue and expenditure, and assets and liabilities relating to those areas;

(v) to assess the progress of the Five-Year Plan in those areas; and

(vi) to analyse the financial and administrative problems that are likely to arise.

ಶ್ರೀ ಕೆ. ಲಕ್ಕಪ್ಪ.—ಫ್ಯಾಕ್ಟ್ಸ್ ಫೈಂಡಿಂಗ್ ಕಮಿಟಿಯ ಅಂಕಿ ಅಂಶಗಳ ಆಧಾರದಮೇಲೆ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾದ ಸಂದರ್ಭ ವಿರುವುದರಿಂದ ನಮ್ಮ ಅಭಿಪ್ರಾಯ ಏನು ಎಂಬುದನ್ನು ಅವರು ಗಮನಿಸಬೇಕಾದದ್ದು ನ್ಯಾಯವಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಆ ಕಮಿಟಿ ರಿಪೋರ್ಟ್ ಹೊರಗಡೆ ಪಬ್ಲಿಷ್ ಆದಮೇಲೆ ಈ ಸಭೆಯ ಅಭಿಪ್ರಾಯ ಅಥವಾ ನರ್ಕಾರದ ಅಭಿಪ್ರಾಯವನ್ನು ಆ ಕಮಿಟಿಗೆ ತಲಪಿಸಬೇಕಾಗುತ್ತದೆ.

ಶ್ರೀ ಕೆ. ಲಕ್ಕಪ್ಪ.—ಆ ಕಮಿಟಿಯವರು 31ನೇ ಆಕ್ಟೋಬರ್ ಅಷ್ಟರಿನೊಳಗೆ ವರದಿ ಕಳುಹಿಸಬೇಕೆಂದು ಸೂಚಿಸಿದ್ದಿರಾ?

ಶ್ರೀ ಕೆ. ಹನುಮಂತಯ್ಯ.—ಅದನ್ನು 3 ತಿಂಗಳು ಎಂದು ಹೇಳಿ ಕಾಣಿಸಿದ್ದೆವು. ಅವರು ಇನ್ನೂ 10-15 ದಿವಸ ಹೆಚ್ಚು ತೆಗೆದುಕೊಂಡಿದ್ದಾರೆ. ಈ ತಿಂಗಳ ಕೊನೆಗೆ ವರದಿ ಬರುತ್ತದೆ, ಬರೆಯುತ್ತಾ ಇದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಆ ವರದಿಯನ್ನು ಸಭೆಯಮುಂದೆ ಇಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ವರದಿಯನ್ನು ಚರ್ಚೆಗೆ ಸಭೆಯಮುಂದೆ ಇಡಬೇಕೆ ಬಿಡಬೇಕೆ ಎಂಬ ನಿರ್ಧಾರಕ್ಕೆ ಇನ್ನೂ ಬಂದಿಲ್ಲ. ಸಭೆಯ ಅಭಿಪ್ರಾಯ ಯಾವ ರೀತಿ ಇದೆಯೋ ಆ ರೀತಿ ನರ್ಕಾರದವರು ನಡೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ.

Mr. DEPUTY SPEAKER.—Next Questions. Questions Nos. 79 and 83 may be taken together. They deal with the same subject.

Akhila Karnataka Formation.

Q.—79. Sri J. MOHAMED IMAM (Jagalur).—

Will the Government be pleased to state:—

(*a*) whether they have considered and come to a decision regarding the future of Mysore and the formation of Akhila Karnataka;

(*b*) whether the Government have sent any memorandum to the States Reorganisation Commission and whether the Chief Minister or any other Minister interviewed the Members of the Commission and gave evidence;

(*c*) whether the Government will ascertain the views of the House in respect of this question?